# ಮೈಸೂರು ಆಶ್ರಮದಿಂದ ಪ್ರಕಟವಾಗಿರುವ ಗೀತೆಯ ಪುಸ್ತಕಗಳು




## ಗೀತಾಭಾವಧಾರೆ

**ಲೇಖಕರು: ಸ್ವಾಮಿ ಸೋಮನಾಥಾನಂದ** ಪುಟಗಳು : 782 ಬೆಲೆ: 290/-

ಭಗವದ್ಗೀತೆಯ ಸಾರವನ್ನು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಿವರಿಸಿರುವ ಅತ್ಯಂತ ಜನಪ್ರಿಯ ಪುಸ್ತಕ. ಇಪ್ಪತ್ತನಾಲ್ಕು ಮುದ್ರಣಗಳನ್ನು ಕಂಡಿರುವ ಈ ಕೃತಿಯ ಸಾವಿರಾರು ಪ್ರತಿಗಳು ಪ್ರತಿ ವರ್ಷ ಮಾರಾಟವಾಗುತ್ತಿವೆ. ಲೇಖಕರು ಗೀತೆಯ ಮೇಲೆ ನೀಡುತ್ತಿದ್ದ ಪ್ರವಚನಗಳನ್ನು ಪುಸ್ತಕರೂಪಕ್ಕಿಳಿಸಿ ಪ್ರಕಟಿಸಿದ್ದಾರೆ. ಮೂಲಶ್ಲೋಕ, ಅದರ ಅನುವಾದ, ಅನಂತರ ವಿಸ್ತೃತವಾದ ವಿವರಣೆ - ಇದು ಈ ಗ್ರಂಥದ ನಿರೂಪಣಾ ವಿಧಾನ. ಗೀತೆಯನ್ನು ಮೊದಲ ಬಾರಿಗೆ ಓದಿ ಅರ್ಥಮಾಡಿಕೊಳ್ಳಬಯಸುವವರಿಗೆ ಅತ್ಯುತ್ತಮ ಪುಸ್ತಕವಿದು.

## ಭಗವದ್ಗೀತೆಯ ವಿಶ್ವಸಂದೇಶ (೩ ಸಂಪುಟಗಳು)

**ಲೇಖಕರು: ಸ್ವಾಮಿ ರಂಗನಾಥಾನಂದ**

ಸಂಪುಟ ೧ ಪುಟಗಳು : 508 ಬೆಲೆ: 140/- ಸಂಪುಟ ೨ ಪುಟಗಳು : 472 ಬೆಲೆ: 100/-

ಸಂಪುಟ ೩ ಪುಟಗಳು : 448 ಬೆಲೆ: 130/-

ಸ್ವಾಮಿ ರಂಗನಾಥಾನಂದರು ಇಂಗ್ಲಿಷ್‌ನಲ್ಲಿ ಬರೆದಿರುವ The Universal Message of Bhagavad Gita ಎಂಬ ಮೂರು ಸಂಪುಟಗಳ ಕೃತಿಯ ಕನ್ನಡಾನುವಾದವಿದು. ಗೀತೆಯ ಸಂದೇಶಗಳನ್ನು 'ಆಧುನಿಕ ಚಿಂತನೆ ಮತ್ತು ಆಧುನಿಕ ಆವಶ್ಯಕತೆಗಳ ಬೆಳಕಿನಲ್ಲಿ' ವ್ಯಾಖ್ಯಾನಿಸಿರುವ ಈ ಗ್ರಂಥ ಮೂಲತಃ ಪೂಜ್ಯ ಸ್ವಾಮೀಜಿಯವರ ಉಪನ್ಯಾಸ ಸರಣಿಯ ಲಿಖಿತರೂಪ. ಗೀತೆಯ ಮೇಲೆ ಬರೆದಿರುವ ಶಾಂಕರ ಭಾಷ್ಯ, ಸ್ವಾಮಿ ವಿವೇಕಾನಂದರ ಚಿಂತನೆಗಳು, ಆಧುನಿಕ ವಿಜ್ಞಾನದ ವಿಚಾರಗಳು ಹಾಗೂ ಜಗತ್ತಿನ ಪ್ರಮುಖ ಚಿಂತಕರ ಆಲೋಚನಾ ಕ್ರಮ - ಎಲ್ಲವನ್ನೂ ಇಲ್ಲಿ ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಗೀತೆಯನ್ನು ಪ್ರಾಯೋಗಿಕ ಜೀವನಕ್ಕೆ ಅನ್ವಯಿಸುವ ವಿಧಾನಕ್ಕೆ ಇಲ್ಲಿ ಒತ್ತು ನೀಡಲಾಗಿದೆ.







## ಶ್ರೀಮದ್ಭಗವದ್ಗೀತೆ (ಶ್ರೀಧರ ಟೀಕಾ ಸಹಿತ)

**ಲೇಖಕರು: ಬ್ರಹ್ಮಚಾರಿ ಭೂದೇವಚೈತನ್ಯ** ಪುಟಗಳು : 596 ಬೆಲೆ: 240/-

ಕನ್ನಡದಲ್ಲಿ ಪ್ರಾಯಶಃ ಮೊದಲ ಬಾರಿಗೆ ಶ್ರೀಧರ ಸ್ವಾಮಿಗಳ 'ಸುಬೋಧಿನೀ' ಟೀಕಾ ಸಮೇತ ಪ್ರಕಟವಾಗಿರುವ ಭಗವದ್ಗೀತೆಯ ಗ್ರಂಥವಿದು. ಶಂಕರರ ಭಾಷ್ಯವನ್ನೇ ಅನುಸರಿಸಿದ್ದರೂ, ಹಲವು ವಿಷಯಗಳಲ್ಲಿ ಸ್ವತಂತ್ರವಾದ ರೀತಿಯಲ್ಲಿ ವಿವರಣೆ ಬರೆದಿರುವುದಾಗಿ ಟೀಕಾಕಾರರೇ ಹೇಳಿಕೊಂಡಿದ್ದಾರೆ. ಭಕ್ತಿಗೆ ಪ್ರಾಧಾನ್ಯವಿರುವ ಈ ಟೀಕೆಯಲ್ಲಿ ಪ್ರತಿಯೊಂದು ಶ್ಲೋಕಕ್ಕೂ ಹೆಚ್ಚಿನ ವಿವರಣೆ ಸಿಗುತ್ತದೆ. ಮೂಲ ಗೀತಾಶ್ಲೋಕಗಳು, ಬಳಿಕ ಸರಳ ಅನುವಾದ, ಅನಂತರ ಮೂಲ ಟೀಕೆ, ಟೀಕೆಯ ಅನುವಾದ, ಹೆಚ್ಚಿನ ವಿವರಣೆಗಳಿಗಾಗಿ ಅಡಿಟಿಪ್ಪಣಿ - ಈ ಕ್ರಮದಿಂದ ಇಲ್ಲಿ ಗೀತೆಯನ್ನು ವಿವರಿಸಲಾಗಿದೆ. ಗೀತೆಯನ್ನು ಆಳವಾಗಿ ಅಭ್ಯಾಸ ಮಾಡಬಯಸುವವರಿಗೆ ಆರಂಭದಲ್ಲಿ ಅತ್ಯಂತ ಉಪಯುಕ್ತವಾದ ಗ್ರಂಥವಿದು.




## ಗೀತಾಪ್ರವಚನ

**ಲೇಖಕರು: ಸ್ವಾಮಿ ವಿವೇಕಾನಂದ** ಪುಟಗಳು : 80 ಬೆಲೆ: 15/-

ಸ್ವಾಮಿ ವಿವೇಕಾನಂದರು ೧೯೦೦ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನೀಡಿದ 'ಶ್ರೀಕೃಷ್ಣ' ಎಂಬ ಪ್ರವಚನ, ಹಾಗೂ ಅದೇ ವರ್ಷ ಸನ್‌ಫ್ರಾನ್ಸಿಸ್ಕೋ ನಗರದಲ್ಲಿ ನೀಡಿದ ಮೂರು ಗೀತಾಪ್ರವಚನಗಳನ್ನು ಈ ಕಿರುಪುಸ್ತಕದಲ್ಲಿ ನೀಡಲಾಗಿದೆ. ಇವು ಸ್ವಾಮೀಜಿಯವರ 'ಕೃತಿಶ್ರೇಣಿ'ಯಿಂದ ಆಯ್ದ ಪ್ರವಚನಗಳು.




## ಗೀತಾಪರಿಚಯ

**ಲೇಖಕರು : ಸ್ವಾಮಿ ಅವಿನಾಶಾನಂದ** ಪುಟಗಳು : 206 ಬೆಲೆ: 45/-

ಮುನ್ನುಡಿಯಲ್ಲಿ ಹೇಳಿರುವಂತೆ, ವಿದ್ಯಾರ್ಥಿಯೊಬ್ಬನನ್ನು ಉದ್ದೇಶಿಸಿ, ಗೀತೆಯ ಉಪದೇಶಗಳನ್ನು ಆಧುನಿಕ ಕಾಲಕ್ಕೆ ಅನ್ವಯವಾಗುವಂತೆ ಬರೆದ ಲೇಖನಮಾಲೆಯಿದು. ಆಂಗ್ಲ ಮೂಲದ ಈ ಕೃತಿಯ ಕನ್ನಡಾನುವಾದ ಸುಲಲಿತವಾದ ಶೈಲಿಯಲ್ಲಿದೆ. ಗೀತೆ ಶಾಸ್ತ್ರಗ್ರಂಥವಾಗಿದ್ದರೂ, ಇಲ್ಲಿನ ವಿವರಣೆ ಕ್ರಮವಾಗಿ ಶ್ಲೋಕಗಳನ್ನು ವಿವರಿಸದೆ, ಗೀತೆಯ ಆಶಯವನ್ನು ಸೂಚಿಸುವ ಕೆಲವು ಪ್ರಮುಖ ಗೀತಾವಾಕ್ಯಗಳಿಗೆ ಅನುಗುಣವಾಗಿದೆ. ವಿನೂತನ ಬಗೆಯ ಬರವಣಿಗೆ ಇಲ್ಲಿನದು.




## ಶ್ರೀಮದ್ಭಗವದ್ಗೀತಾ (ಸಟೀಕಾ)

**ಲೇಖಕರು : ಸ್ವಾಮಿ ಆದಿದೇವಾನಂದ** ಪುಟಗಳು : 348 ಬೆಲೆ: 110/-

ಈ ಗ್ರಂಥವು ಗೀತೆಯನ್ನು ಅಭ್ಯಾಸ ಮಾಡುವವರಿಗೆ ಅತ್ಯಂತ ಪ್ರಯೋಜನಕಾರಿ. ಪ್ರತಿ ಶ್ಲೋಕಕ್ಕೂ ಪ್ರತಿಪದಾರ್ಥ, ಸರಳ ಅನುವಾದ, ಇತರ ಉಪಯುಕ್ತ ಟಿಪ್ಪಣಿಗಳಿವೆ. ಮುನ್ನುಡಿಯಲ್ಲಿ ಅನುವಾದಕರಾದ ಸ್ವಾಮಿ ಆದಿದೇವಾನಂದಜಿ ಮಹಾರಾಜ್ ಹೇಳುತ್ತಾರೆ: ''ತಾತ್ಪರ್ಯ -ಟೀಕೆಗಳಲ್ಲಿ ಶ್ರೀಶಂಕರಾಚಾರ್ಯರ ಭಾಷ್ಯವನ್ನು ಮುಖ್ಯವಾಗಿ ಅನುಸರಿಸಿದ್ದರೂ ಅಲ್ಲಲ್ಲಿ ಶ್ರೀರಾಮಾನುಜಾಚಾರ್ಯರ ಭಾಷ್ಯದ ಪ್ರಕಾರವೂ ಅರ್ಥವನ್ನು ಕೊಟ್ಟಿದೆ.'' ಅರ್ಥವಿವರಣೆಯಲ್ಲಿ ಹಲವು ಕಡೆ ಶ್ರೀಶಂಕರರ ಹಾಗೂ ಶ್ರೀರಾಮಾನುಜರ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೇಳಿರುವುದು ಭಾಷ್ಯಗಳ ಅಭಿಪ್ರಾಯಗಳನ್ನು ಹೋಲಿಸಿ ನೋಡಲೂ ಅನುಕೂಲವಾಗುತ್ತದೆ.

## ಶ್ರೀಮದ್ಭಗವದ್ಗೀತೆ ಚಿಂತನ - ಮಂಥನ

**ಲೇಖಕರು : ಸ್ವಾಮಿ ನಿತ್ಯಸ್ಥಾನಂದ** ಪುಟಗಳು : 306 ಬೆಲೆ: 120/-

ಲೋಕೋತ್ತರ ಕೃತಿ ಗೀತೆಯಲ್ಲಿ ಬರುವ ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಬರೆದಿರುವ ೩೪ ಲೇಖನಗಳ ಸಂಕಲನವಿದು. ಸುಮಾರು ಮೂರು ವರ್ಷಗಳ ಕಾಲ 'ವಿವೇಕಪ್ರಭ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಸರಣಿ ಲೇಖನಗಳ ಸಂಕಲನವಿದು. ಗೀತೆಯ ತತ್ತ್ವ, ಚಿಂತನೆ ಹಾಗೂ ಆದರ್ಶಗಳನ್ನು ವಿವರಿಸುವಾಗ ಲೇಖಕರು ಅನೇಕ ಪ್ರಾಚೀನ ಹಾಗೂ ಆಧುನಿಕ ಚಿಂತಕರ ಹಲವು ಆಲೋಚನೆಗಳನ್ನು ಚರ್ಚಿಸುತ್ತಾರೆ; ಹಲವು ರೋಚಕ ಕಥೆ, ದೃಷ್ಟಾಂತ ಹಾಗೂ ನುಡಿಗಟ್ಟು-ಹೇಳಿಕೆಗಳನ್ನು ಉಲ್ಲೇಖಿಸುತ್ತಾರೆ. ಗೀತಾವಾಕ್ಯಗಳ ಹಿಂದಿರುವ 'ಆಳವಾದ' ಅರ್ಥಗಳನ್ನು ಲೇಖಕರು ಮನದಟ್ಟು ಮಾಡಿಸಿಕೊಡುತ್ತಾರೆ. ಆಳವಾದ ಚಿಂತನೆ ನಡೆಸಲು, ಗೀತೆಯ ಅಂತರಂಗವನ್ನರಿಯಲು ಈ ಕೃತಿಯನ್ನು ಅಗತ್ಯವಾಗಿ ಓದಬೇಕು.




## ಸಣ್ಣ ಗೀತಾ ಪುಸ್ತಕಗಳು

**ಗೀತಾದರ್ಶನ**
ಸ್ವಾಮಿ ಸೋಮನಾಥಾನಂದ
ಪುಟ :64, ಬೆಲೆ : 10

**ಶ್ರೀಮದ್ಭಗವದ್ಗೀತಾ (ಮೂಲ)**
(ದಪ್ಪ ಅಕ್ಷರಗಳಲ್ಲಿ)
ಪುಟ :84, ಬೆಲೆ : 60

**ಗೀತಾ ಭಾವಸಂಚಯ**
ಪುಟ : 36, ಬೆಲೆ: 12

**ಶ್ರೀಮದ್ಭಗವದ್ಗೀತಾ**
(ಪಾರಾಯಣ- ಅರ್ಥಸಹಿತ)
ಪುಟ : 280, ಬೆಲೆ : 45













**ಶ್ರೀಮದ್ಭಗವದ್ಗೀತಾ (ಮೂಲ ಮಾತ್ರ)**
ಪುಟ : 142, ಬೆಲೆ: 25




*ಪ್ರಕಟಣೆಗಳ ಪಟ್ಟಿಗಾಗಿ ಹಾಗೂ ಇತರ ಮಾಹಿತಿಗಾಗಿ ಸಂಪರ್ಕಿಸಿ:*

**ಶ್ರೀರಾಮಕೃಷ್ಣ ಆಶ್ರಮ ಪ್ರಕಟಣಾ ವಿಭಾಗ**
**ಯಾದವಗಿರಿ, ಮೈಸೂರು 570 020**
ಫೋನ್ ನಂ: 8618387401, 9482880009 (WhatsApp)
(0821) 2417444, 2412424